# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/110/14-15 ದಿನಾಂಕ :08-09-2016

ಉಪಸ್ಥಿತರು: ಶ್ರೀ ಲೋಕೇಶ್ ಪಿ.ಎನ್ (ಕ.ಆ.ಸೇ)

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| 1)ಶ್ರೀ ಹೆಚ್ ಉಪ್ಪಳಪ್ಪ ತಂದೆ ಲೇಟ್ ನರಸಪ್ಪ<br>ಗೆಜ್ಜಳ್ಳಿಗ್ರಾಮ ಆಲೂರು ತಾಲೂಕು ಕರ್ನೂಲ್ ಜಿಲ್ಲಾ<br><br>(ಶ್ರೀ ಬಿ.ವಿ ಬಸವರಾಜ ಹಾಗೂ ಶ್ರೀ ಜಿ ನೀಲನಗೌಡ,<br>ವಕೀಲರು ಬಳ್ಳಾರಿ) | 1)ತಹಶೀಲ್ದಾರರು ಸಿರುಗುಪ್ಪ<br>2)ಕಂದಾಯ ನಿರೀಕ್ಷಕರು ಕರೂರು<br>3)ಗ್ರಾಮ ಲೆಕ್ಕಾಧಿಕಾರಿಗಳು ಕೆ.ಬೆಳಗಲ್ಲು<br>4)ಶ್ರೀ ಕೆ.ಬಿ.ಲಕ್ಷ್ಮೀನಾರಾಯಣ ರೆಡ್ಡಿ ತಂದೆ ಅನಂತ ರೆಡ್ಡಿ<br>ಸಾಯಿ ಶಾರದ ನಿಲಯ ಕೋಟೆ ಬಳ್ಳಾರಿ |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಸಿರುಗುಪ್ಪ | ಕೆ.ಬೆಳಗಲ್ಲು | 482/B/2 | 5.28 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು ಕರೂರು ಇವರ M R No H145/2011-12 ದಿನಾಂಕ 30/01/2012 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 16.06.2015,07.06.2016,08.09.2016 ಗಳಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿ, ಸಿರುಗುಪ್ಪ ತಾಲ್ಲೂಕಿನ ಕೆ.ಬೆಳಗಲ್ಲು ಗ್ರಾಮದ ಸ.ನಂ 482/B/2 ವಿಸ್ತೀರ್ಣ: 5.28 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ಕರೂರು ಇವರ M R No H145/2011-12 ದಿನಾಂಕ 30/01/2012 ರಂದು ಜೆ-ನಮೂನೆಯಲ್ಲಿರುವ ಹಕ್ಕು ಬದಲಾವಣೆ ವಿವರ ಮತ್ತು ಲಗತ್ತು ದಸ್ತಾವೇಜಿನಲ್ಲಿರುವ ವಿವರಗಳು ಪರಸ್ಪರ ತಾಳೆ ಇರದ ಕಾರಣ ಹಕ್ಕು ಬದಲಾವಣೆ ಗೈರು ಮಂಜೂರು ಮಾಡಿರುತ್ತಾರೆ, ಮನಿದಾರರು ಸದರಿ ಗೈರು ಮಂಜೂರು ಆದೇಶವನ್ನು ಪ್ರಶ್ನಿಸುತ್ತಾ,ಗೈರು ಮಂಜೂರು ಆದೇಶವನ್ನು ರದ್ದು ಪಡಿಸಿ,ಕ್ರಯ ಪತ್ರದಂತೆ ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ವಾದಿಗಳು ಈ ನ್ಯಾಯಾಲಯಕ್ಕೆ ಮೇಲ್ಮನವಿಯೊಂದಿಗೆ ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ಸ.ನಂ.482/B/2 ವಿಸ್ತೀರ್ಣ 5.28 ಕ್ಷೇತ್ರದ ಬದಲಿಗೆ ವಿಸ್ತೀರ್ಣ 5.29 ರಲ್ಲಿ ಮಾರಾಟ ಮಾಡಿದವರು ಸ್ವಾಧೀನದಲ್ಲಿರುತ್ತಾರೆ.ಈ ಕುರಿತು ಸರ್ವೆ ಪತ್ರ ಮಾಡಿಕೊಂಡಿದ್ದು, ಅದರಂತೆ ಎಂ.ಆರ್,ಆಗಬೇಕೆಂದು ಕೋರಿರುತ್ತಾರೆ.ಸ್ವಾಧೀನದಲ್ಲಿ ಮಾರಾಟಗಾರರ ವಿಸ್ತೀರ್ಣ 5.29 ರಲ್ಲಿ ಇದ್ದಾಗ್ಯೂ ROR ನಲ್ಲಿ ವಿಸ್ತೀರ್ಣ 5.28 ಕ್ಷೇತ್ರಕ್ಕೆ ಮಾತ್ರ ಮಾಲೀಕತ್ವ ಹೊಂದಿದ್ದು ಈ ಕುರಿತಂತೆ ಪೋಡಿರದ್ಧತಿ ಮಾಡಿಕೊಂಡು,ಸ್ವಾಧೀನಾನುಭವದ ಪ್ರಕಾರ ಹೊಸದಾಗಿ ಪೋಡಿ ಮಾಡಿಕೊಡಲು ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕ ಮತ್ತು ಉಪನಿರ್ದೇಶಕರು,ಭೂದಾಖಲೆಗಳ ವಿಭಾಗ ಬಳ್ಳಾರಿ. ಇವರಿಗೆ ಅರ್ಜಿ ಸಲ್ಲಿಸಲು ಸೂಚಿಸಿ, ಸದರಿ ಮೇಲ್ಮನವಿಯನ್ನು ಈ ಹಂತದಲ್ಲಿಯೇ ವಜಾಗೊಳಿಸಿ ಆದೇಶಿಸುವ ಈ ಕೆಳಕಂಡಂತೆ ಆದೇಶ.

:: ಆದೇಶ ::

ವಾದಿಯ ಮೇಲ್ಮನವಿಯನ್ನು ವಜಾಗೊಳಿಸಿದೆ.

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಸಿರುಗುಪ್ಪ ತಾಲ್ಲೂಕಿನ ಕೆ.ಬೆಳಗಲ್ಲ ಗ್ರಾಮದ ಸ.ನಂ 482/B/2 ವಿಸ್ತೀರ್ಣ: 5.28 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ಕರೂರು ಇವರ M R No H145/2011-12 ದಿನಾಂಕ 30/01/2012 ರ ಆದೇಶವನ್ನು ಎತ್ತಿಹಿಡಿದಿದ್ದು.ವಾದಿಯ ಮೇಲ್ಮನವಿಯನ್ನು ಈ ಹಂತದಲ್ಲಿ ಯೇ ವಜಾಗೊಳಸಿ ಆದೇಶಿಸಿದೆ.

ಈ ಆದೇಶವನ್ನು ಹೇಳಿ, ಬರೆಯಿಸಿ ತಪ್ಪುಗಳನ್ನು ತಿದ್ದಿ ದಿನಾಂಕ: 08.09.2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,

ಬಳ್ಳಾರಿ